


ಬೆಳ್ನೊರೆಯ ಎರ್ಮಾಯಿ

# ನೀರತಾಯಿ, ಬೆಳ್ನೊರೆಯ ಎರ್ಮಾಯಿ



ಕಾಡಿನ ಎಲ್ಲ ದಾರಿಗಳು ಜಲಪಾತದ ಕಡೆಗೆ...

**ಧರ್ಮಸ್ಥಳಕ್ಕೆ ಸಮೀಪದ ಎರ್ಮಾಯಿ ಜಲಪಾತ ಕಾಡಿನ ನಡುವೆ ಹುದುಗಿರುವ ಅದ್ಭುತ ಚೆಲುದಾಣ. ಎಂಬತ್ತು ಅಡಿ ಎತ್ತರದಿಂದ ಧುಮ್ಮಿಕ್ಕುವ ಈ ನೀರತಾಯಿಯನ್ನು ನೋಡುವುದೊಂದು ವಿಶಿಷ್ಟ ಸುಖದ ಅನುಭವ.**

**■ ಅರುಣ್ ಕಿಲ್ಲೂರು**

ದಕ್ಷಿಣ ಕನ್ನಡದ ಜೀವನದಿ ನೇತ್ರಾವತಿಯ ಉಪನದಿಗಳಲ್ಲೊಂದು ‘ಏಳೂವರೆ ಹಳ್ಳ’. ಈ ನದಿ ಸೃಷ್ಟಿಸಿರುವ ‘ಎರ್ಮಾಯಿ ಫಾಲ್ಸ್’ ಸುಮಾರು 80 ಅಡಿ ಎತ್ತರದಿಂದ, ಬಂಡೆಗಳ ಮಧ್ಯದಿಂದ ಧುಮುಕುತ್ತಾ ಪ್ರವಾಸಿಗರಿಗೆ ರಮ್ಯ–ರೋಚಕ ಅನುಭವ ನೀಡುತ್ತದೆ.

ಬೆಳ್ತಂಗಡಿ ತಾಲೂಕಿನ ಮಿತ್ತ ಬಾಗಿಲು ಗ್ರಾಮದ ಏಳೂವರೆ ಹಳ್ಳ ಎಂಬಲ್ಲಿ ಈ ಎರ್ಮಾಯಿ ಜಲಪಾತ ಇದೆ. ಪಶ್ಚಿಮ ಘಟ್ಟದ ದಟ್ಟ ಕಾಡು, ತಂಪಿನ, ಹಸಿರು ವಾತಾವರಣದ ನಡುವೆ ಸುಮಾರು ಎರಡು ಕಿ.ಮೀ.ನಷ್ಟು ನಡೆದುಕೊಂಡು ಬರುವ ಪ್ರವಾಸಿಗರ ದಣಿವನ್ನು ಎರ್ಮಾಯಿ ತಾಯಿಯಂತೆ ತಣಿಸುತ್ತದೆ.

ಮಳೆಗಾಲದಲ್ಲಿ ಆರ್ಭಟಿಸುವ ಜಲಪಾತದ ಬಳಿ ಸಾಗುವುದು ತುಂಬಾ ಕಷ್ಟಕರ. ಜೂನ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ ಮೈ ತುಂಬಿಕೊಂಡು ಧುಮುಕುವ ಎರ್ಮಾಯಿಗೆ ನವೆಂಬರ್‌ನಿಂದ ಏಪ್ರಿಲ್ ಕೊನೆಯವರೆಗೂ ಭೇಟಿ ನೀಡಬಹುದು. ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಹೆಚ್ಚು ನೀರು ಇರುವ ಕಾರಣ, ಪ್ರವಾಸಿಗರಿಗೆ ಇಲ್ಲಿ ನೀರಹಬ್ಬ ಖಚಿತ.